# ಪಾತ್ರಗಳ ಬಗ್ಗೆ ಭಯ ಇದ್ದೇ ಇದೆ



ರವಿ ಪ್ರಸಾದ
ಮಂಡ್ಯ
ಕಲರ್ಸ್ ಸೂಪರ್‌ನ
ಮಗಳು ಜಾನಕಿಯ
ಚಂದು ಭಾರ್ಗಿ

◆ **ನಿಮ್ಮನ್ನು ಕಂಡ ತಕ್ಷಣ ಭಯ– ಸಿಟ್ಟು ಎರಡೂ ಬರುತ್ತೆ. ಯಾಕೆ ಹಾಗೆನಿಸುತ್ತೆ?**

ಭಾರ್ಗಿ ಪಾತ್ರವೇ ಅಂತಹದ್ದು. ಒಳಗೊಂದು ಹೊರಗೊಂದು ನಡೆ ಇರುವ ಮನುಷ್ಯ. ದ್ವೇಷ ಸಾಧಿಸುವ ಅವನ ಕೆಟ್ಟಗುಣ ಕಾರಣವಿರಬಹುದು. ವಿಚಿತ್ರ ಸ್ವಭಾವ. ತನಗೆ ಬೇಕಾಗಿದ್ದನ್ನು ಪಡೆಯಲು ಯಾವ ಮಟ್ಟಕ್ಕಾದರೂ ಇಳಿಯುತ್ತಾನೆ. ಏನಾದರೂ ಮಾಡುವ ಸ್ವಾರ್ಥಿ.

◆ **ಚಂದು ಭಾರ್ಗಿ ಪಾತ್ರ ನಿರ್ವಹಣೆಯಿಂದ ನಿಮ್ಮಲ್ಲಿ ಆದ ಬದಲಾವಣೆ ಏನು?**

ನಟನೆಯನ್ನು ವೃತ್ತಿಪರವಾಗಿ ಆಯ್ಕೆ ಮಾಡಿಕೊಂಡು 15 ವರ್ಷ ಆಗಿದೆ. ಭಿನ್ನ ಭಿನ್ನ ಪಾತ್ರಗಳನ್ನು ನಿರ್ವಹಿಸಿದ್ದೇನೆ. ಚಂದು ಭಾರ್ಗಿ ನನಗೆ ಅರಿವಿಲ್ಲದಂತೆ ಒಂದು ಪ್ರಬುದ್ಧತೆಯನ್ನು ತುಂಬಿದೆ. ಪಾತ್ರವನ್ನು ಅನುಭವಿಸಿ ಅಭಿನಯಿಸುತ್ತೇನೆ. ಆ ಪಾತ್ರದೊಳಗಿನ ಪ್ರವೇಶ ಮತ್ತು ನಿರ್ಗಮನ ತುಂಬಾ ಸುಲಭವಾಗಿದೆ. ನಿರ್ದೇಶಕ ಸೀತಾರಾಂ ಸರ್ ಆಕ್ಷನ್ ಅಂದ ತಕ್ಷಣ ಪಾತ್ರದ ಒಳಗೆ ಹೋಗುತ್ತೇನೆ. ಕಟ್ ಎಂದ ತಕ್ಷಣ ಪಾತ್ರದಿಂದ ಹೊರಗೆ ಬಂದಿರುತ್ತೇನೆ.

◆ **ನಿಮ್ಮ ಹಾಗೆ ನಟನಾಗಿ ರೂಪುಗೊಳ್ಳಲು ಸಿದ್ಧತೆ ಹೇಗೆ ಮಾಡಿಕೊಳ್ಳಬೇಕು?**

ಸಿದ್ಧತೆ ಏನೂ ಇಲ್ಲ. ರಂಗಭೂಮಿ ನನಗೆ ಹೇಳಿಕೊಟ್ಟಿದೆ. ಯಾವ ಸಂದರ್ಭದಲ್ಲಿ ಡೈಲಾಗ್ ಹೇಳಬೇಕು, ಯಾವಾಗ ಮಾತು ನಿಲ್ಲಿಸಬೇಕು. ಮೌನ, ಧ್ವನಿಯ ಏರಿಳಿತಗಳೆಲ್ಲವನ್ನೂ ರಂಗಭೂಮಿಯ ಗುರುಗಳಿಂದ ಕಲಿತದ್ದು. ಬಿ.ವಿ. ಕಾರಂತ್, ಬಸವಲಿಂಗಯ್ಯ, ಮಾಲತೇಶ ಬಡಿಗೇರ್, ಅಶೋಕ ಬಾದರದಿನ್ನಿ... ಇವರೆಲ್ಲಾ ನನಗೆ ಕಲಿಸಿದ್ದಾರೆ. ನಾನು ಮೂರನೇ ತರಗತಿಯಿಂದಲೂ ಅಭಿನಯಿಸುತ್ತಿದ್ದೇನೆ. ಆಗ ಸರಿ– ತಪ್ಪುಗಳು ಗೊತ್ತಿರಲಿಲ್ಲ. ಪಿಯು ಓದುವ ಸಂದರ್ಭದಲ್ಲಿ ಮಂಡ್ಯದ 'ಜನ ದನಿ' ಎಂಬ ಹವ್ಯಾಸಿ ರಂಗತಂಡದ ಒಳಗೆ ಪ್ರವೇಶ ಪಡೆದೆ. ಆಗ ಬಸವಲಿಂಗಯ್ಯ 'ಅಂತಿಗೊನೆ' ನಿರ್ದೇಶನ ಮಾಡಿದ್ದರು. ನನಗೆ ಧೂತನ ಪಾತ್ರ ಕೊಟ್ಟಿದ್ದರು. ನಾಟಕ ಮುಗಿಯುವ ತನಕ ಒಂದೇ ಒಂದು ಡೈಲಾಗ್ ಆ ಪಾತ್ರಕ್ಕೆ ಇರಲಿಲ್ಲ. ಇನ್ನೇನು ನಾಟಕ ಮುಗಿಯಬೇಕು ಎನ್ನುವ ಹೊತ್ತಿಗೆ ಎರಡು ಪುಟಗಳ ಸುದೀರ್ಘ ಸಂಭಾಷಣೆ. ಅದೇ ಆ ನಾಟಕದ ತಿರುಳನ್ನು ಒಳಗೊಂಡಿತ್ತು. ನಾನೂ ನಟಿಸಬಹುದು ಎನ್ನುವ ಭರವಸೆ ಆ ಪಾತ್ರ ತುಂಬಿತು. ಆದರೆ ಇವತ್ತಿನವರೆಗೂ ಭಯದಿಂದ ನಾನು ಮುಕ್ತನಾಗಿಲ್ಲ. ಯಾವುದೇ ಪಾತ್ರ ಎದುರಾದರೂ ಇದನ್ನು ನಾನು ನಿಭಾಯಿಸಲು ಸಾಧ್ಯವೇ ಎನ್ನುವ ಪ್ರಶ್ನೆ ಕಾಡುತ್ತದೆ. ಭಯದಿಂದಲೇ ಪಾತ್ರ ಪ್ರವೇಶ ಮಾಡುತ್ತೇನೆ.

◆ **ಸಂವಾದಗಳಲ್ಲಿ ವೀಕ್ಷಕರ ಕೆಂಗಣ್ಣಿಗೆ ನೀವು ಗುರಿಯಾಗುತ್ತಿದ್ದೀರಾ?**

ಬೇರೆ ಸಂತೆ, ಜಾತ್ರೆಯಂತೆ 'ಮಗಳು ಜಾನಕಿ' ಸಂವಾದ ಇರಲ್ಲ. ವೀಕ್ಷಕರೊಂದಿಗೆ ಸಂವಾದ ಪರಿಕಲ್ಪನೆಯನ್ನು ಮೊಟ್ಟಮೊದಲು ಪರಿಚಯಿಸಿದವರು ಸೀತಾರಾಂ. ಅಲ್ಲಿ ಪರಸ್ಪರರ ವಿಷಯ ವಿನಿಮಯ ತುಂಬಾ ಅಚ್ಚುಕಟ್ಟಾಗಿ ನಡೆಯುತ್ತದೆ. ಮೊದಲು ಪ್ರಶ್ನೆಯನ್ನು ಸಂಗ್ರಹಿಸಿ ಅದರಲ್ಲಿ ಸೂಕ್ತವಾದ ಪ್ರಶ್ನೆಗಳನ್ನು ಮಾತ್ರ ಆಯ್ಕೆ ಮಾಡುತ್ತಾರೆ. ಒಟ್ಟಾರೆ ಧಾರಾವಾಹಿಯನ್ನು ಕೇಂದ್ರೀಕರಿಸಿ ಎಲ್ಲಾ ಪಾತ್ರಗಳು ಪ್ರಶ್ನೆಯನ್ನು ಎದುರಿಸುವಂತೆ ರೂಪಿಸಲಾಗಿರುತ್ತದೆ.

◆ **ನಿಮ್ಮ ಪರಿಚಯ ಮಾಡಿಕೊಡುತ್ತೀರಾ?**

ಊರು ಮಂಡ್ಯ, ತಂದೆ ಡಾ.ಎಚ್.ಎಸ್. ಮುದ್ದೇಗೌಡ ನಿವೃತ್ತ ಪ್ರಾಧ್ಯಾಪಕರು. ಜಿಲ್ಲಾ ಕಸಾಪ ಅಧ್ಯಕ್ಷರೂ ಆಗಿದ್ದರು. ಅಮ್ಮ ವೆಂಕಟಲಕ್ಷ್ಮಿ ಗೃಹಿಣಿ. ಇಬ್ಬರು ತಂಗಿಯರು ಒಬ್ಬಳು ಉಪನ್ಯಾಸಕಿ ಮತ್ತೊಬ್ಬಳು ಸಾಫ್ಟ್‌ವೇರ್ ಎಂಜಿನೀಯರ್. ನನ್ನ ಪತ್ನಿ ಮಾಲತಿ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಗ ರಾಜೀವ ಮೂರನೇ ತರಗತಿಯಲ್ಲಿ ಓದುತ್ತಿದ್ದಾನೆ. ನಾನು ಎಂ.ಎ. ಎಲ್‌ಎಲ್‌ಬಿ ಮಾಡಿದ್ದೇನೆ. ರಂಗಭೂಮಿ– ನಟನೆಯಲ್ಲಿ ತೊಡಗಿದ್ದೇನೆ.

◆ **ಧಾರಾವಾಹಿಯ ಕಥೆ ದಿಕ್ಕು ತಪ್ಪಿದ್ದು ಏಕೆ? ನಿರಂಜನ್ ಅವರನ್ನು ನಿಮ್ಮ ಕುಟುಂಬಕ್ಕೆ ನೀವೇ ನನ್ನ ಸ್ನೇಹಿತರ ಮಗ ಎಂದು ಪರಿಚಯಿಸಿದ್ರಿ. ಅದು ಈಗ ಯಾರಿಗೂ ನೆನಪಿಲ್ವ?**

ತಾಂತ್ರಿಕವಾಗಿ ಈ ಪ್ರಶ್ನೆಗೆ ನಾನು ಉತ್ತರಿಸಲು ಆಗುವುದಿಲ್ಲ. ಆ ಸಂದರ್ಭವನ್ನು ಜಾನಕಿಯಾಗಲಿ, ಚಂಚಲಾ, ರಶ್ಮಿ ಮರೆತಿಲ್ಲ. ನಾನೇ ನಿರಂಜನ್ ನನ್ನ ಸ್ನೇಹಿತರ ಮಗ ಎಂದು ಹೇಳಿದ್ದೆ.

■ **ರಾಘವೇಂದ್ರ ಕೆ**